# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1397 |
| 2. | ಸದಸ್ಯರ ಹೆಸರು | : | ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | : | 20.03.2025 |
| 4. | ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಇತ್ತೀಚೆಗೆ ವಿತ್ತೀಯ ಕೊರತೆ ಮಾಯವಾಗುತ್ತಿದ್ದು ಈ ಕೊರತೆಯನ್ನು ನಿಭಾಯಿಸಲು ಕೈಗೊಂಡಿರುವ ಕ್ರಮಗಳೇನು;</td><td>ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಗ್ಯಾರಂಟಿ ಯೋಜನೆಗಳನ್ನು ಒಳಗೊಂಡಂತೆ ಇತರೆ ಕಲ್ಯಾಣ ಕಾರ್ಯಕ್ರಮಗಳಿಗೆ, ಬಂಡವಾಳ ಯೋಜನೆಗಳಿಗೆ ಭರಪೂರ ಅನುದಾನವನ್ನು ನೀಡಿದ್ದರೂ ಸಹ ವಿತ್ತೀಯ ಕೊರತೆಯನ್ನು ಆರ್ಥಿಕ ಹೊಣೆಗಾರಿಕೆ ಅಧಿನಿಯಮದಲ್ಲಿ ಸೂಚಿಸಿರುವ ಜಿ.ಎಸ್.ಡಿ.ಪಿಯ ಶೇ.3ರ ಮಿತಿಯೊಳಗೆ ಪಾಲನೆ ಮಾಡಿರುತ್ತದೆ.</td></tr>
<tr><td>ಆ</td><td>ರಾಜ್ಯದಲ್ಲಿ 2024-25 ನೇ ಹಣಕಾಸು ವರ್ಷದಲ್ಲಿ ಈವರೆಗೂ ಮಾಡಿರುವ ಸಾಲದ ಮೊತ್ತ ಎಷ್ಟು; (ಸಂಪೂರ್ಣ ವಿವರ ಒದಗಿಸುವುದು)</td><td>ರಾಜ್ಯ ಸರ್ಕಾರವು 2024-25 ನೇ ಹಣಕಾಸು ವರ್ಷದಲ್ಲಿ ದಿನಾಂಕ: 31.03.2025ರವರೆಗೆ ಮಾಡಿರುವ ಸಾಲದ ಮೊತ್ತ ರೂ.103341.08 ಕೋಟಿಗಳು. 2024-25ನೇ ಹಣಕಾಸು ವರ್ಷದಲ್ಲಿ ಸರ್ಕಾರ ಪಡೆದಿರುವ ಬಾಹ್ಯ ಮತ್ತು ಆಂತರಿಕ ಸಾಲದ ವಿವರಗಳು ಈ ಕೆಳಕಂಡಂತಿರುತ್ತದೆ:
<table>
<tr><th>ವಿವರಗಳು</th><th>ಬಾಹ್ಯ ಮತ್ತು ಆಂತರಿಕ ಸಾಲ (ರೂ. ಕೋಟಿಗಳಲ್ಲಿ) 31 ಮಾರ್ಚ ಅಂತ್ಯದ ವರೆಗೆ</th></tr>
<tr><td>ಆಂತರಿಕ ಸಾಲ (ಮುಕ್ತ ಮಾರುಕಟ್ಟೆ & ನಬಾರ್ಡ್ ಸಾಲ)</td><td>95277.56</td></tr>
<tr><td>ಬಾಹ್ಯ ಸಾಲ ಸೇರಿ ಭಾರತ ಸರ್ಕಾರದ ಸಾಲ</td><td>8064.25</td></tr>
<tr><td>ಒಟ್ಟು ಮೊತ್ತ</td><td>103341.08</td></tr>
</table>
</td></tr>
<tr><td>ಇ</td><td>ರಾಜ್ಯದಲ್ಲಿ ಸಂಪೂರ್ಣ ಸಂಪನ್ಮೂಲ ಕ್ರೂಢೀಕರಿಸಲು ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)</td><td>ರಾಜ್ಯ ಸರ್ಕಾರವು ರಾಜಸ್ವ ಸಂಗ್ರಹಣೆಯ ಆಯವ್ಯಯ ಗುರಿಯನ್ನು ತಲುಪಲು ಹಲವಾರು ಸಂಪನ್ಮೂಲ ಕ್ರೋಢೀಕರಣ ಕ್ರಮಗಳನ್ನು ಕೈಗೊಂಡಿರುತ್ತದೆ. ತೆರಿಗೆ ದರಗಳನ್ನು ಕಾಲಾನುಕ್ರಮದಲ್ಲಿ ಪರಿಷ್ಕರಿಸುವುದರ ಜೊತೆಗೆ, ತೆರಿಗೆ ಇಲಾಖೆಗಳಲ್ಲಿ ವಿಚಕ್ಷಣೆಯನ್ನು ಹೆಚ್ಚಿಸುವುದು, ತೆರಿಗೆ ಸೋರಿಕೆಯನ್ನು ತಡೆಯುವುದು ಹಾಗು ತೆರಿಗೆ ಅನುಸರಣೆಯನ್ನು ಹೆಚ್ಚಿಸುವ ಕ್ರಮಗಳನ್ನು ಕೈಗೊಂಡಿರುತ್ತದೆ. ಅಲ್ಲದೆ, ತೆರಿಗೆ ಅಧಿಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಅಗತ್ಯ ತರಬೇತಿ ನೀಡುವ ಮೂಲಕ ತೆರಿಗೆ ಇಲಾಖೆಗಳನ್ನು ಬಲವರ್ಧನೆ ಮಾಡುವ ಕ್ರಮವಹಿಸಿರುತ್ತದೆ.<br><br>ಇದಲ್ಲದೆ, ತೆರಿಗೆ ಸಂಗ್ರಹಣೆಯು ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ಹೆಚ್ಚು ಅವಲಂಬಿತವಾಗಿರುವುದರಿಂದ ಹಾಗು ರಾಜ್ಯದ ಆರ್ಥಿಕತೆಯು ದೇಶದ ಆರ್ಥಿಕತೆಯಿಂದ ಪ್ರಭಾವಿತವಾಗಿರುವುದರಿಂದ, ರಾಜ್ಯದ ಆರ್ಥಿಕತೆಯನ್ನು ಉತ್ತೇಜಿಸುವ ಕ್ರಮಗಳನ್ನು ಸರ್ಕಾರ ಕೈಗೊಂಡಿರುತ್ತದೆ.</td></tr>
</table>

| | | |
|---|---|---|
| | | ಸುಪ್ರೀಂ ಕೋರ್ಟ್ ತೀರ್ಪಿನ ಹಿನ್ನಲೆಯಲ್ಲಿ, ರಾಜ್ಯ ಸರ್ಕಾರವು ರಾಜಧನದ ಜೊತೆಗೆ ಪ್ರಮುಖ ಖನಿಜಗಳ ಮೇಲೆ ತೆರಿಗೆ ವಿಧಿಸಬಹುದಾಗಿದೆ. ಈ ಹಿನ್ನಲೆಯಲ್ಲಿ 2025-26ನೇ ಸಾಲಿಗೆ ಖನಿಜಗಳ ಮೇಲೆ ವಿಧಿಸುವ ತೆರಿಗೆಯಿಂದ 3,000 ಕೋಟಿ ರೂ.ಗಳ ತೆರಿಗೆ ರಾಜಸ್ವ ಸ್ವೀಕೃತಿಯನ್ನು ಅಂದಾಜಿಸಲಾಗಿದೆ. |
| ಈ | ರಾಜ್ಯ ಸರ್ಕಾರ ಹೊಸದಾಗಿ ಲೇಬರ್ ಸೆಸ್, ಅಗ್ರಿಕಲ್ಚರ್ ಮತ್ತಿತರ ಸೆಸ್ ಹಾಕಲು ಚಿಂತನೆ ನಡೆಸಿದೆಯೇ; (ವಿವರ ಒದಗಿಸುವುದು) | ರಾಜ್ಯದಲ್ಲಿ ಹೊಸ ಲೇಬರ್ ಸೆಸ್ ಅಗ್ರಿಕಲ್ಚರ್ ಮತ್ತಿತರ ಸೆಸ್ ವಿಧಿಸುವ ಕುರಿತು ಹಾಲಿ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ. |
| ಉ | ರಾಜ್ಯದ ಹಣಕಾಸು ಪರಿಸ್ಥಿತಿ ಕುರಿತು ಶ್ವೇತಪತ್ರ ಹೊರಡಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ? | ವಿಧಾನ ಮಂಡಲದ ಉಭಯ ಸದನಗಳಲ್ಲಿ ಮತ್ತು ಸಾರ್ವಜನಿಕ ವಲಯದಲ್ಲಿ ರಾಜ್ಯದ ಹಣಕಾಸು ಪರಿಸ್ಥಿತಿ ಕುರಿತು ಸುದೀರ್ಘವಾಗಿ ಈಗಾಗಲೇ ಚರ್ಚೆ ನಡೆದಿರುತ್ತದೆ. ಆದುದರಿಂದ, ಶ್ವೇತ ಪತ್ರ ಹೊರಡಿಸುವ ಕ್ರಮ ಸರ್ಕಾರದ ಮುಂದೆ ಇರುವುದಿಲ್ಲ. |

ಕಡತ ಸಂಖ್ಯೆ: ಆಇ 38 ಬಿಜಿಎಲ್ 2025

(ಸಿದ್ದರಾಮಯ್ಯ)

ಮುಖ್ಯಮಂತ್ರಿ